1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 153/2021

| | | |
|---|---|---|
| ಸಾಕ್ಷಿದಾರರ ಹೆಸರು | - ಮಹದೇವಿ | ಪಿಡಬ್ಲೂ - 2 |
| ಗಂಡನ ಹೆಸರು | - ಹೆಚ್ ಎಸ್ ಮಂಜುನಾಥ ಗೌಡ | ಸಿಡಬ್ಲೂ - 11 |
| ವಯಸ್ಸು | - 69 ವರ್ಷ | |
| ಉದ್ಯೋಗ | - ಗೃಹಿಣಿ | |
| ವಾಸ ಸ್ಥಳ | - ಹೆಡದಾಳ್ | |

ದಿನಾಂಕಃ 26-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಈ ಪ್ರಕರಣದ 1 ನೇ ಆರೋಪಿ ಗೊತ್ತು. 2 ಮತ್ತು 3 ನೇ ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ಈ ಹಿಂದೆ ನೋಡಿಲ್ಲ. ಫ್ರಾಸಾ.1 ಮತ್ತು ಚಾಸಾ.10 ರವರು ನನ್ನ ಮಕ್ಕಳು. ಚಾಸಾ.12 ನನ್ನ ಸೊಸೆ ಅಂದರೆ ಫ್ರಾಸಾ.1 ರವರ ಹೆಂಡತಿ. ಚಾಸಾ.19 ರವರು 1 ನೇ ಆರೋಪಿಯ ತಾಯಿ. ಚಾಸಾ.13 ಮತ್ತು 14 ರವರು ಗೊತ್ತು. ಚಾಸಾ.18 ರವರು ಗೊತ್ತು, ಆತ 1 ನೇಆರೋಪಿಯ ಅಣ್ಣ .

2. ದಿಃ 03-06-2021 ರ ಗುರುವಾರದಂದು ನಮ್ಮ ಗ್ರಾಮದ ಹುಡುಗರೆಲ್ಲರೂ ನಮ್ಮ ಗ್ರಾಮದಲ್ಲಿರುವ ದೇವಿರಮ್ಮ ದೇವಸ್ಥಾನದ ಪಕ್ಕದಲ್ಲಿರುವ ಗದ್ದೆಯಲ್ಲಿ ಕ್ರಿಕೇಟ್ ಆಟವಾಡುವಾಗ ಜಗಳ ಮಾಡಿಕೊಳ್ಳುತ್ತಿದ್ದರು. ಆಗ ಆಲ್ದೂರಿಗೆ ಪೆಟ್ರೋಲ್ ತರಲು ಹೋಗಿದ್ದ ನನ್ನ ಮಗನಾದ ಫ್ರಾಸಾ.1 ಮತ್ತು ಅಲ್ಲಿದ್ದ ನನ್ನ 2 ನೇ ಮಗನಾದ ಚಾಸಾ.10 ರವರು ಗಲಾಟೆಯನ್ನು ನೋಡಿ ಎಲ್ಲರೂ ಊರಿನ ಮನೆಯವರು ಬೆಳಗ್ಗೆ ಎದ್ದರೆ ಒಬ್ಬರ ಮುಖವನ್ನು ಒಬ್ಬರು ನೋಡಿಕೊಳ್ಳಬೇಕು ಜಗಳ ಮಾಡಬೇಡಿ ಎಂದು ಬಿಡಿಸಲು

ಹೋದಾಗ 1 ನೇ ಆರೋಪಿ ನೀನು ಸರಿಯಿಲ್ಲವೆಂದು ಪ್ರಾಸಾ.1 ರವರ ಮೇಲೆ ಜೋರು ಮಾಡಿದ್ದಾಗಿ ಪ್ರಾಸಾ.1 ರವರು ವಾಪಸ್ ಮನೆಗೆ  ಬಂದಾಗ ನನಗೆ ತಿಳಿಸಿದರು. ಆಗ ನಾನು ನನ್ನ ಮಕ್ಕಳನ್ನು ಕುರಿತು ಅವರು ಏನಾದರು ಮಾಡಿಕೊಳ್ಳಲಿ ನೀವು ಸುಮ್ಮನೆ ಇದ್ದು ಬಿಡಿ ಎಂದು ಹೇಳಿದೆನು.

3. ಮಾರನೆ ದಿನ ಅಂದರೆ ದಿಃ 04-06-2021 ರ ಶುಕ್ರವಾರ ರಾತ್ರಿ  11 ರಿಂದ 11.15 ಗಂಟೆ ಸುಮಾರಿಗೆ 1 ನೇ ಆರೋಪಿ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ತನ್ನ ವರ್ನಾ ಕಾರನ್ನು ನಿಲ್ಲಿಸಿ  ಚೇತನ್ ಗೌಡ, ಚೇತನ್ ಗೌಡ ನಿನ್ನ ಕಾರನ್ನು ಯಾರೋ ತೆಗೆದುಕೊಂಡು ಹೋಗುತ್ತಿದ್ದಾರೆ ಮನೆಯಿಂದ ಈಚೆ ಬಾ ಎಂದು ಕರೆದನು. ಆಗ ನಾನು ಏನಾಗಿದೆ ಎಂದು ನೋಡಲು ನನ್ನ ಮನೆಯ ಕಿಟಕಿಯನ್ನು ತೆಗೆದು ನೋಡಿದಾಗ 1 ನೇ ಆರೋಪಿ ಕೋವಿಯನ್ನು ಹಿಡಿದುಕೊಂಡು ಬಂದು ಮೊದಲಿಗೆ ನಮ್ಮ ವಾಸದ ಮನೆಯ ಮುಂಬಾಗಿಲಿಗೆ ಗುಂಡು ಹಾರಿಸಿದನು, ಎರಡನೇ ಬಾರಿಗೆ ನಮ್ಮ ಕಾರಿಗೆ ಗುಂಡನ್ನು ಹಾರಿಸಿದನು, ಮೂರನೆ ಬಾರಿಗೆ ನಮ್ಮ ಮನೆಯ ಮುಂಭಾಗದ ಗೋಡೆಗೆ ಗುಂಡು ಹಾರಿಸಿದನು ಮತ್ತು ನಾಲ್ಕನೆ ಬಾರಿಗೆ ಮೇಲೆ ಗಾಳಿಗೆ ಗುಂಡನ್ನು ಹಾರಿಸಿದನು. ಯಾರಾದರು ಊರಿನವರು ಸಾಕ್ಷಿ ಹೇಳಲು ಬಂದರೆ ನಾನು ಯಾರನ್ನು ಬಿಡುವುದಿಲ್ಲ ಎಂದು ಹೇಳಿ 1 ನೇ ಆರೋಪಿ ತನ್ನ ಕಾರನ್ನು ಹತ್ತಿಕೊಂಡು  ಅಲ್ಲಿಂದ ಹೋದನು.

4. ನಂತರ ಅದೇ ದಿನ ರಾತ್ರಿ ನಾವು ಮಲ್ಲಂದೂರು ಪೊಲೀಸ್ ಠಾಣೆಗೆ ಫೋನ್ ಮಾಡಿ ನಡೆದ ವಿಚಾರವನ್ನು ತಿಳಿಸಿದೆವು. ಆಗ ಸದರಿ ಠಾಣೆಯ ಪಿ.ಎಸ್.ಐ. ಆದ ಚಾಸಾ.42 ನಂದಿನಿರವರು ನಮ್ಮ

ಮನೆಯ ಹತ್ತಿರ ಬಂದರು. ನಾವು ಅವರು ಬಂದ ಮೇಲೆ ಮನೆಯ ಬಾಗಿಲನ್ನು ತೆಗೆದು ಹೊರಗೆ ಬಂದೆವು.

5. ಮಾರನೆ ದಿನ ಅಂದರೆ ದಿಃ 05-06-2021 ರಂದು ನಾನು ನನ್ನ ಮಕ್ಕಳನ್ನು ಮಲ್ಲಂದೂರು ಪೊಲೀಸ್ ಠಾಣೆಗೆ ದೂರನ್ನು ನೀಡಲು ಕಳುಹಿಸಿಕೊಟ್ಟೆನು. ಆಗ ನನ್ನ ಮೊದಲನೇ ಮಗನಾದ ಪ್ರಾಸಾ.1 ರವರು ಪೊಲೀಸರಿಗೆ ದೂರನ್ನು ಕೊಟ್ಟಿದ್ದಾರೆ. ನಂತರ ಪೊಲೀಸರು ನನ್ನನ್ನು ವಿಚಾರಿಸಿದ್ದರು.

6. ನಂತರ ಜುಲೈ ತಿಂಗಳಿನಲ್ಲಿ ಒಂದು ದಿನ ಪೊಲೀಸರು ನನ್ನನ್ನು ಚಿಕ್ಕಮಗಳೂರಿನ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದರು. ಆಗ ನಾನು ಅವರಿಗೆ ಮೇಲೆ ಹೇಳಿದಂತೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ.

**(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**).**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ